Sri C. NAGAMMA KESHAVAMURTHY.—In view of the policy of the Government to encourage the public to start small-scale industries and also improve the existing ones, what are the facilities that Government has provided for the small-scale industrialists in Davanagere ?

Sri S. M. KRISHNA.—We provide them with all the raw materials that are needed for setting up of industry; we provide them with power; we provide them with land. In a nutshell, it is the intention of the Government to provide the infrastructure facilities to setting up of industries.

Smt. C. NAGAMMA KESHAVAMURTHY.—I want some details regarding the raw material depot and the common fucility Centre at Harihar What steps have been taken to introduce improvments in this matter ?

Sri S. M. KRISHNA.—It is under the consideration of the Government.

ಶ್ರೀ ಬಿ. ಭೈರಪ್ಪಾಜಿ.—ಪ್ರತಿಯೊಂದು ತಾಲ್ಲೂಕಿನಲ್ಲೂ ಇದೇ ರೀತಿ ಅಲ್ಲಲ್ಲಿ ದೊರೆಯತಕ್ಕ ರಾಮೋಚ್ರೆರಿಯುಲ್ಸಿಗೆ ತಕ್ಕಂಥಿ ಕೈಗಾರಿಕೆಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಅಧ್ಯಕ್ಷರು.—ಆ ಉಪ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

STAFF OF TAKEN OVER HIGH SCHOOL OF D. L. B.

244 Smt. C. NAGAMMA KESHAVAMURTHY (Davangere).—Will the Minister for Education be pleased to state :—

(*a*) whether the Government is treating all the employees of the taken-over local body high schools as regular Government servants ;

(*b*) if so, the opportunities provided regarding their promotions and transfers to Government institutions ?

Sri A. R. BADARINARAYANA (Minister of Education).—

(*a*) No.

(b) The Director of public Instruction has been permitted to fill up the vacancies by transfer or by making in-charge arrangements in respect of Class—III staff only, under Rule 32 of Mysore Civil Services Rules, temporarily pending finalisation of the Gradation List.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಸರ್ಕಾರದವರು ಈ ಮುನಿಸಿಪಲ್ ಮತ್ತು ತಾಲ್ಲೂಕ್ ಬೋರ್ಡ್ ಹೈಸ್ಕೂಲುಗಳನ್ನು ತಾವು ಸಂಪೂರ್ಣವಾಗಿ ವಹಿಸಿಕೊಂಡನಂತರ ಅಲ್ಲಿ ಕೆಲಸ ಮಾತಕ್ಕಡ ನೌಕರರನ್ನು, ಅವರು ಸರ್ಕಾರಿ ನೌಕರರಲ್ಲ ಎಂದರೆ ಅದು ಸರಿಯಾದ ಉತ್ತರವೇ ?

† ಶ್ರೀ ಎ.ಆರ್. ಬದರಿನಾರಾಯಣ್.—ಮಾನ್ಯ ಸದಸ್ಯರು ಎಲ್ಲಾ 'ನೌಕರರುಗಳನ್ನೂ' ಎಂದು ಪ್ರಶ್ನೆಯಲ್ಲಿ ಕೇಳಿದ್ದಕ್ಕಾಗಿ ಉತ್ತರದಲ್ಲಿ 'ಇರ್ಲಾ' ಎಂದು ತಿಳಿಸಿರುತ್ತೆ. ಎಲ್ಲಾ ನೌಕರರನ್ನೂ ಸರ್ಕಾರಿ ನೌಕರರೆಂದು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

Sri MALLIKARJUN. KHARGE—I want to know whom the Government will treat as Gevernment servants.

ಶ್ರೀ ಎ. ಆರ್. ಬದರೀ ನಾರಾಯಣ್.—ಅಲ್ಲಿ ಮೇಷ್ಟ್ರರಾಗಿ ಕೆಲಸ ಮಾಡತಕ್ಕವರು ಮಾತ್ರ ಅಲ್ಲಿ ಮೇಷ್ಟ್ರರಾಗಿ ಕೆಲಸ ಮಾಡುತ್ತೇವೆಂದು ತಮ್ಮ ಒಪ್ಪಿಗೆಯನ್ನು ಕೊಟ್ಟರೆ ಅಂಥವರನ್ನು ಮಾತ್ರ ಸರ್ಕಾರಿ ನೌಕರರೆಂದು ಸರ್ಕಾರ ಒಪ್ಪಿಕೊಳ್ಳುತ್ತದೆ. They must opt.

ಶ್ರೀ ಕೊಣಂದೂರು ಲಿಂಗಪ್ಪ.—ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಶಾಲೆಗಳನ್ನು ವಿನ್ಯಾಸಿಸಿದ ನಂತರ, ಪ್ರಾಥಮಿಕ ಶಾಲೆಗಳಲ್ಲಿ ನೌಕರರನ್ನು ನೇಮಕ ಮಾಡುವಾಗ ಮೊದಲೇ ಸರ್ಕಾರದ ನೀತಿ ನಿಯಮಗಳ ಪ್ರಕಾರ ಅವರನ್ನು ಸರ್ಕಾರದ ನೌಕರರೆಂದು ಸಂಪೂರ್ಣವಾಗಿ ಪರಿಗಣಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎ.ಆರ್. ಬದರೀ ನಾರಾಯಣ್.—ಸ್ಥಳೀಯ ಸಂಸ್ಥೆಗಳು ಯಾವ್ಯಾವ ಸ್ಕೂಲುಗಳನ್ನು ತೆಗೆದುಕೊಂಡಿವ್ಯಾರೋ, ಅಲ್ಲಿ ಯಾವ್ಯಾವ ನೌಕರರುಗಳು ಸರ್ಕಾರದ ಸರ್ವಿಸ್ಸಿಗೆ ಅಪ್ಷ್ ಮಾಡಿರುತ್ತಾರೋ ಅಂತಹವರನ್ನು ಮಾತ್ರ ಸರ್ಕಾರದ ಸರ್ವಿಸ್ಸಿಗೆ ಸೇರಿದ ನೌಕರರೆಂದು ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ. ಪ್ರಭಾಕರ್.—ಆ ರೀತಿಯಾಗಿ ಎಲ್ಲಿನ ನೌಕರರು ಈಗ ಒಪ್ಪಿಗೆ ಕೊಟ್ಟರೆ ಆ ರೀತಿಯಾಗಿ ಅವಕಾಶ ಮಾಡಿಕೊಡುತ್ತೀರಾ ? ಅಲ್ಲಿನ ನೌಕರರನ್ನೆಲ್ಲ ಸರ್ಕಾರದ ಸರ್ವಿಸ್ಸಿಗೆ ಸೇರಿಸೆಂತೆ ಟ್ರೀಟ್ ಮಾಡಬೇಕೆಂದು ಸರ್ಕಾರದ ಮುಂದೆ ಅನೇಕ ಬೇಡಿಕೆಗಳನ್ನು ಇಟ್ಟಿದ್ದರೂ, ಅದನ್ನು ಪರಿಗಣಿಸಲ್ಲವೆಂಬುದು ನಿಜವೇ ? ಸಿವಿಲ್ ಸರ್ವಿಸ್ ರೂಲ್ಸ್ ಪ್ರಕಾರ ಈಗಿರತಕ್ಕ ಗ್ರೆಡೇಷನ್ ಲಿಸ್ಟ್ ಎಷ್ಟು ವರ್ಷಗಳಿಂದ ಹೆಂಡಿಂಗ್‌ನಲ್ಲಿದೆ ?

ಶ್ರೀ ಎ. ಆರ್. ಬದರಿನಾರಾಯಣ್.—ಯಾವ್ಯಾರು ಒಪ್ಪಿಗೆ ಕೊಟ್ಟಿದ್ದಾರೋ ಅವರನ್ನು ಸರ್ಕಾರದ ಸೇವಾ ನೌಕರರೆಂದು ಟ್ರೀಟ್ ಮಾಡುತ್ತೇವೆ. ಗ್ರೆಡೇಷನ್ ಲಿಸ್ಟ್ ವಿಷಯ ಬಹಳ ಜಟಿಲವಾದ ಪ್ರಶ್ನೆ. ಅದನ್ನು ಈಗಾಗಲೇ ಸರ್ಕಾರದವರು ಎಗ್ಸಾಮಿನ್ ಮಾಡುದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಶಾಲೆಗಳಲ್ಲಿರತಕ್ಕ ನೌಕರ ವರ್ಗದಲ್ಲಿ ಯಾವ್ಯಾವ ವರ್ಗದವನ್ನು ಆಟೋಮ್ಯಾಟಿಕ್ಕಾಗಿ ಸರ್ಕಾರದ ನೌಕರರೆಂದು ಪರಿಗಣನೆ ಮಾಡುತ್ತೀರಿ ? ಯಾವ್ಯಾವ ವರ್ಗದವರನ್ನು ಆ ರೀತಿಯಾಗಿ ಪರಿಗಣನೆ ಮಾಡುವುದಿಲ್ಲವೆಂದು ಹೇಳುತ್ತೀರಿ ? ಸರ್ಕಾರದವರು ಹೇಳುವ ರೀತಿಯಲ್ಲಿ ಅವರು ಸರ್ಕಾರ ಸೇವಾ ನೌಕರರಂತೆ ಆಗುವಂತಹ ಮಟ್ಟದಲ್ಲಿ ಇಲ್ಲವೇ ? ಆ ರೀತಿಯಾಗಿ ಅವರು ಇರಲು ಕಾರಣವೇನು ? ಯಾವ್ಯಾವ ವರ್ಗದಲ್ಲಿ ಎಷ್ಟೆಷ್ಟು ಜನರು ಇದ್ದಾರೆ ?

ಶ್ರೀ ಎ. ಆರ್. ಬದರೀನಾರಾಯಣ್—ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಎಂ. ಮಲ್ಲಪ್ಪ.—ಆ ರೀತಿ ಒಪ್ಪಿಗೆಯಾಗಿ ಸರ್ಕಾರದ ಒಂದು ನಿಯಮಕ್ಕೆ ಅನುಸಾರವಾಗಿ ನಡೆಯುವುದಾದರೆ ಆ ಒಂದು ಸರ್ಕಾರದ ನಿಯಮ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳುವುದಾದರೆ, ಆ ರೀತಿ ಒಪ್ಪಿಗೆ ಕೊಟ್ಟವರನ್ನು ಮಾತ್ರ ಸರ್ಕಾರದ ಸೇವಾ ನೌಕರರೆಂದು ಪರಿಗಣಿಸುವುದಾದರೆ, ಮುಂದೆ ಆ ಸ್ಕೂಲುಗಳಲ್ಲಿ ಪರಸ್ಪರ ಕೆಲಸಮಾಡುವುದಕ್ಕೆ ತೊಂದರೆಯಾಗುವುದು ತಪ್ಪುಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಒಬ್ಬ ನೌಕರ ಲೋಕರ್ ಬಾಡಿಯಲ್ಲಿ ಕೆಲಸ ಮಾಡುತ್ತೇನೆಂದು ಸೇರಿಕೊಳ್ಳುತ್ತಾನೆ. ಅಂತಹವರನ್ನು ಸರ್ಕಾರಕ್ಕೇ ಬರಬೇಕೆಂದು ಬಲವಂತ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆಂದೇನೂ ಗೊಂದಲವಾಗುವುದಿಲ್ಲ. ಗೊಂದಲವಾಗದಂತೆ ಇವರಲ್ಲಿ ಕೆಲಸಮಾಡಲಿಕ್ಕಾಗುತ್ತದೆ.

Sri S. M. YAHYA.—Taking over local body schools will create new problems of seniority for the teachers if employees opt to become Government servants. How will the Government solve this new problems of seniority ?

ಶ್ರೀ ಎ. ಆರ್. ಬದರೀನಾರಾಯಣ.—ಈ ಮುನಿಸಿಪಲ್ ಸ್ಕೂಲ್ಸ್‌ಗೆ ಒಂದು ಕೇಡರ್ ತಾಲ್ಲೂಕ್ ಬೋರ್ಡ್‌ಗೆ ಒಂದು ಕೇಡರ್, ಸರ್ಕಾರದ ಸ್ಕೂಲುಗಳಿಗೆ ಒಂದು ಕೇಡರ್ ಹೀಗೆ ಮೂರು ಕೇಡರ್‌ಗಳಿವೆ. ಆ ಕೇಡರ್‌ಗಳ ಪ್ರಕಾರ ಸೀನಿಯಾರಿಟಿ ಲಿಸ್ಟ್‌ಗಳು ಆಗುತ್ತವೆ.

Smt. DAMAYANTHI BORE GOWDA.—When will the take-over of the schools be completed, Sir ? we are told that is not yet over.

Sri A. R. BADARINARAYAN.—We have already taken over 71 municipal schools, 295 taluk development schools and 3 town panchayat schools; and wherever has not given consent to take over, we cannot take it.

ಶ್ರೀ ಎನ್. ಜಿ. ಹಾಲಪ್ಪ.—ಅದಕ್ಕೆ ಒಪ್ಪಿಗೆ ಕೊಟ್ಟಿರುವವರು ಸರ್ಕಾರದ ನೌಕರರಂತೆಯೂ ಪರಿಗಣಿಸುತ್ತೀವೆಂದು ಹೇಳುವಾಗ, ಒಪ್ಪಿಗೆ ಕೊಡದೇ ಇರುವವರ ಪೈಕಿ ಯಾರಾದರೂ ರೈತರು ಇದ್ದರೆ, ಅವರು ಅಲ್ಲಿಗೆ ರಿಸೈನ್ ಮಾಡಿದ್ದಾರೆಂದು ಸರ್ಕಾರದ ಅರ್ಥವೇ ?

ಶ್ರೀ ಎ. ಆರ್. ಬದರೀನಾರಾಯಣ.—ಇಷ್ಟವಿಲ್ಲವೆಂದು ಒಪ್ಪಿಗೆ ಕೊಡದೇ ಹೋದರೆ ಅಂತಹವರು ತಾಲ್ಲೂಕ್ ಬೋರ್ಡಿನಲ್ಲಿ ಬೇರೆ ಕೆಲಸವೇನಾದರೂ ಮಾಡಬಹುದು.

ಶ್ರೀ ಸಿ. ಬೈರೇಗೌಡ.—ಆ ರೀತಿಯಾಗಿ ಒಪ್ಪಿಗೆಯನ್ನು ಸರ್ಕಾರದ ಶಾಲೆಗಳಲ್ಲಿ ಕೊಡುತ್ತಾರೆ. ಕೆಲವು ಶಾಲೆಗಳಲ್ಲಿ ಅಗ್ರಿಮೆಂಟನ್ನು ಕೊಟ್ಟಿಲ್ಲ. ಆಂದಮೇಲೆ ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತಾರೆ ? ಅಂದಮೇಲೆ ಆ ರೀತಿಯಾಗಿ ಅಗ್ರಿಮೆಂಟ್ ಕೊಡದೇ ಇರುವ ಶಾಲೆಗಳು ತಾಲ್ಲೂಕು ಬೋರ್ಡ್ ಅಥವಾ ಮುನಿಸಿಪಲ್ ಶಾಲೆಗಳು ಎಂಬುದಾಗಿ ಹೇಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಎಕ್ಸ್ ಮೈಸೂರು ಏರಿಯಾದಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇವೆ. ನಾನ್ ಎಕ್ಸ್ ಮೈಸೂರು ಏರಿಯಾದೊಳಗೂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇವೆ. ಆದರೆ ಲೋಕಲ್ ಅಥಾರಿಟಿಗೆ ಆ ರೀತಿ ಇಲ್ಲವೆಂದು ಹೇಳಬಹುದು.

ಶ್ರೀ ಸಿ. ಬೈರೇಗೌಡ.—ಅಲ್ಲಿ ಕೆಲವರು ಅಗ್ರಿಮೆಂಟ್ ಕೊಟ್ಟಿದ್ದಾರೆ. ಮತ್ತೆ ಕೆಲವರು ಅಗ್ರಿಮೆಂಟ್ ಕೊಟ್ಟಿಲ್ಲ. ಅಂತಹವರ ಗತಿ ಏನಾಗಬೇಕು ?

ಶ್ರೀ ಎ. ಆರ್. ಬದರೀನಾರಾಯಣ.—ಅಗ್ರಿಮೆಂಟ್ ಕೊಡದೇ ಹೋದಾಗ್ಯೂ ಅಂತಹವರು ಸರ್ಕಾರದ ಸೇವಾ ನೌಕರರಾಗುತ್ತೀವೆಂದು ಒಪ್ಪಿಗೆ ಕೊಟ್ಟರೆ ಅಂತವರನ್ನು ಗೌರ್ನಮೆಂಟ್ ಸರ್ವೆಂಟ್ಸ್ ಎಂಬುದಾಗಿ ಟ್ರೀಟ್‌ಮಾಡುತ್ತೀವೆ.

ಶ್ರೀ ಸಿ. ಬೈರೇಗೌಡ.—ಅಗ್ರಿಮೆಂಟ್ ಕೊಡದೇ ಇದ್ದರೂ ಮಾಡ್ಯೆದಲ್ಲಿ ಕೆಲವು ನೇಮಕಗಳು ಆಗಿವೆ. ಆದ್ದರಿಂದ ಸರ್ಕಾರದ ನಿಯಮಗಳನುಸಾರವಾಗಿ ಅವರಿಗೆ ಏನು ರಿಯಾಯಿತಿ ತೋರಿಸುತ್ತೀರಿ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಸಬ್‌ಸೀಕ್ವೆಂಟಾಗಿ ಮಾಡಿರುವುದನ್ನು ಸರ್ಕಾರ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಸ್ಥಳೀಯ ಸಂಸ್ಥೆಗಳ ಮತ್ತು ತಾಲ್ಲೂಕು ಬೋರ್ಡ್‌ಗಳ ಪ್ರಾಥಮಿಕ ಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡಾಗ್ಗೆ ಮೂರು ತರಹ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಆಗುತ್ತವೆ. ಅವರ ಮೇಲೆ ಸೀನಿಯಾರಿಟಿ ಲಿಸ್ಟ್ ಪ್ರಿಪೇರ್ ಮಾಡಿ ಪ್ರೊಮೊಷನ್ ಕೊಡುತ್ತೀರಿ. ಅವರನ್ನು ಸರ್ಕಾರದ ಉದ್ಯೋಗಸ್ಥರನ್ನಾಗಿ ಮಾಡಿದಾಗ ಸರ್ಕಾರದ ನಾನಾ ಇಲಾಖೆಗಳಿಗೆ ಅವರನ್ನು ವರ್ಗಮಾಡುವುದಿಲ್ಲ. ಅದರೆ ಲೋಕಲ್‌ಬಾಡಿಯ ಪ್ರಾಥಮಿಕ ಶಾಲೆಗಳಲ್ಲಿರುವರು. ಆ ಪ್ರಾಥಮಿಕ ಶಾಲೆಗಳಲ್ಲಿಯೇ ಮತ್ತು ತಾಲ್ಲೂಕು ಬೋರ್ಡ್ ಪ್ರಾಥಮಿಕ ಶಾಲೆಗಳಲ್ಲಿರುವರು ಆ ತಾಲ್ಲೂಕು ಬೋರ್ಡ್ ಪ್ರಾಥಮಿಕ ಶಾಲೆಗಳಲ್ಲಿಯೇ ಕೆಲಸಮಾಡುವುದರಿಂದ

ಅವರಿಗೆ ಪರನ್ಪರ ವರ್ಗಾವರ್ಗಿ ಇದೆ. ಅಂತಹವರನ್ನು ಈಗ ಸರ್ಕಾರದ ಉದ್ಯೋಗಸ್ಥರನ್ನಾಗಿ ಮಾಡಿದರೆ ಸರ್ಕಾರದ ನಿಯಮವಳಿಗನುಸಾರವಾಗಿ ಯಾವ್ಯಾವ ವರ್ಗಗಳಿಗೆ ಎಷ್ಟೆಷ್ಟು ಸೀನಿಯಾರಿಟಿ ಪ್ರಕಾರ ಪ್ರೊಮೋಷನ್ ಸಿಗಬೇಕೋ ಅಷ್ಟು ಸಿಗದೇ ಇರುವುದರಿಂದ ಅಂಥಾದ್ದನ್ನು ಸರಿ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಮೂರು ಯೂನಿಟ್ಸುಗಳಿವೆ. ಆ ಮೂರು ಯೂನಿಟ್ಸುಗಳಲ್ಲಿ ಅಯಾ ಯೂನಿಟ್ ಪ್ರಕಾರ ಅವರಿಗೆ ಸೀನಿಯಾರಿಟಿ ದೊರೆಯಬೇಕಾಗುತ್ತದೆ. ಇದರ ಬಗ್ಗೆ ಒಂದು ಕನ್ಸಾಲಿಡೇಟೆಡ್ ಲಿಸ್ಟನ್ನು ಮಾಡುವುದರಿಂದ ಅವರಲ್ಲಿ ದಕ್ಷರಾದ ಅಧಿಕಾರಿಗಳನ್ನು ಸೆಲೆಕ್ಟ್ ಮಾಡುತ್ತಾರೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ತಾಲ್ಲೂಕ್‌ಬೋರ್ಡ್ ಹೈಸ್ಕೂಲ್‌ಸಿನಿಂದ ಮುನಿಸಿಪಲ್ ಹೈಸ್ಕೂಲುಗಳಿಗೆ ಅಲ್ಲಿನ ನೌಕರರನ್ನು ವರ್ಗಾವರ್ಗಿ ಮಾಡುತ್ತಾರೆ. ಅವರೆ ಮುನಿಸಿಪಲ್ ಹೈಸ್ಕೂಲ್‌ನಿಂದ ಸರ್ಕಾರದ ಹೈಸ್ಕೂಲುಗಳಿಗೆ ವರ್ಗವಾಡುತ್ತಾ ಇಲ್ಲ. ಆದ್ದರಿಂದ ಇದನ್ನು ಸರಿಪಡಿಸಿ ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ?

ಶ್ರೀ ಎ. ಆರ್. ಬದರೀನಾರಾಯಣ.—ಹಾಗೆ ಒಂದು ಯೂನಿಟ್ಟಿನಿಂದ ಇನ್ನೊಂದು ಯೂನಿಟ್ಟಿಗೆ ಟ್ರಾನ್ಸ್‌ಫರ್ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಹಾಗಾದರೆ ಅಲ್ಲಂದಲ್ಲಿಗೆ ಚೆಂಪೊರರಿಯಾಗಿಯಾದರೂ ವರ್ಗಾವಣೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಆರ್. ಬದರೀನಾರಾಯಣ.—ಒಂದುವೇಳೆ ಅಲ್ಲಿ ಕೆಲಸಗಳು ಖಾಲಿ ಇದ್ದು ಇನ್‌ಕಂಬೆಂಟ್ಸ್ ಇಲ್ಲದೆ ಹೋದರೆ, ಆಗ ಚೆಂಪೊರರಿಯಾಗಿ ಸೀನಿಯಾರಿಟಿಯಲ್ಲಿ ಯಾರಿಗೂ ಅಫೆಕ್ಟ್ ಆಗದಹಾಗೆ ಕೆಲವರನ್ನು ನೇಮಿಸುವ ಹಾಗೆ ನೋಡಿಕೊಳ್ಳುತ್ತೇವೆ.

Conversion of Town Panchayats in Bellary District

249. Sri B. E. RAMAIAH (Siruguppa).—

Will the Minister for Community Development and Social Welfare be pleased to state.—

the number of Town Panchayats in Bellary District with a population of over 10,000 according to 1971 Census ; the action, if any, taken by the Government to convert them as Town Municipalities ?

Sri M. MALLIKARJUNA SWAMY (Minisiter for Community Development and Social Welfare).—

There are 10 Town Panchayats in Bellary District with a population of more than 10,000 according to 1971 Census figures.

Conversion of Town Panchayats into Municipalities is under active consideration of Government.

ಶ್ರೀ ಬಿ. ಇ. ರಾಮಯ್ಯ.—ಉತ್ತರದಲ್ಲಿ ಟೌನ್ ಪರಿಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವ ವಿಷಯವು ಸರ್ಕಾರದವರು ಸಕ್ರಿಯ ಪರಿಶೀಲನೆಯಲ್ಲಿದೆ ಎಂಬುದಾಗಿ ಹೇಳಿದೆ. ಅಂದಮೇಲೆ ಎಷ್ಟು ದಿನಗಳು, ಸಮಯ ಅದಕ್ಕೆ ಬೇಕಾಗುತ್ತದೆ ?